ಡಾಂಬರೀಕರಣ ಕಾಮಗಾರಿ ಮಾಡಲಾಗಿದೆಯೇ?

2. ಮಾಡಿದ್ದಲ್ಲಿ ಯಾವ ಯೋಜನೆಯಡಿ ಮಾಡಲಾಗಿದೆ?

3. ಅಂದಾಜುಪಟ್ಟಿ ತಯಾರಿಸಿದ ವರ್ಷ ಯಾವುದು? ಅಂದಾಜು ಪಟ್ಟಿಯನ್ನು ರಸ್ತೆಯ ಗುಣಮಟ್ಟದ ಆಧಾರದ ಮೇಲೆ ಸಿದ್ಧಗೊಳಿಸಲಾಗಿದೆಯೇ?

4. ಇಲ್ಲದಿದ್ದಲ್ಲಿ ಅಂತಹ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಉತ್ತರ

1. ಪಿರಿಯಾಪಟ್ಟಣ ತಾಲ್ಲೂಕು-ಹಲಗನಹಳ್ಳಿ ಕಣಗಾಲು ಕೊಪ್ಪ ರಸ್ತೆಯಲ್ಲಿ ಒಟ್ಟು 10.00 ಕಿ.ಮೀ. ಉದ್ದಕ್ಕೆ ಡಾಂಬರೀಕರಣ ಮಾಡಲಾಗಿದೆ.

2. ಈ ಕಾಮಗಾರಿಯನ್ನು ನಬಾರ್ಡ್ (ಆರ್.ಐ.ಡಿ.ಎಫ್-3ರಡಿ) ಯೋಜನೆಯಲ್ಲಿ ಕೈಗೊಳ್ಳಲಾಗಿದೆ.

3. 1997-98ನೇ ವರ್ಷದಲ್ಲಿ ಸದರಿ ರಸ್ತೆಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಅಂದಾಜು ಪಟ್ಟಿಯನ್ನು ಅಂದಿನ ರಸ್ತೆಯ ಸ್ಥಿತಿಯನ್ನು ಅವಲೋಕಿಸಿ ಸಿದ್ದಗೊಳಿಸಲಾಗಿತ್ತು.

4. ಉದ್ಭವಿಸುವುದಿಲ್ಲ.

ಪಿರಿಯಾಪಟ್ಟಣ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ರಾಜ್ಯ ಹೆದ್ದಾರಿಗಳನ್ನು ಡಾಂಬರೀಕರಣ ಮಾಡುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 698(55)

ಸದಸ್ಯರ ಹೆಸರು : ಶ್ರೀ ಬಸವರಾಜು ಹೆಚ್.ಸಿ.(ಪಿರಿಯಾಪಟ್ಟಣ)

ಉತ್ತರಿಸುವ ಸಚಿವರು : ಶ್ರೀ ಧರ್ಮಸಿಂಗ್(ಲೋಕೋಪಯೋಗಿ ಸಚಿವರು)

ಪ್ರಶ್ನೆ

1. ರಾಜ್ಯ ಹೆದ್ದಾರಿಗಳ ಅಗಲ ಎಷ್ಟಿರಬೇಕೆಂದು ನಿಗಧಿಪಡಿಸಲಾಗಿದೆ; ರಾಜ್ಯ ಹೆದ್ದಾರಿ

ನಿಯಮಕ್ಕನುಗುಣವಾಗಿ ಡಾಂಬರೀಕರಣ ಮಾಡಲು ವಿಸ್ತೀರ್ಣ ಎಷ್ಟಿರಬೇಕು?

2. ಪಿರಿಯಾಪಟ್ಟಣ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ರಾಜ್ಯ ಹೆದ್ದಾರಿಗಳು ಯಾವುವು? ಇವುಗಳ ಅಗಲ ನಿಯಮಾನುಸಾರ ಇದೆಯೇ?

3. ಇಲ್ಲದಿದ್ದಲ್ಲಿ ಅಂತಹ ರಸ್ತೆಗಳು ಯಾವುವು? ರಸ್ತೆ ಅಗಲೀಕರಣ ಮಾಡುವ ಕೆಲಸ ನಡೆದಿದೆಯೇ?

4. ರಸ್ತೆ ಅಗಲ ಕಾಮಗಾರಿ ಪ್ರಾರಂಭಿಸಲು ನಿಗಧಿಪಡಿಸಿದ ಅವಧಿ ಎಷ್ಟು ಯಾವಾಗ ಪೂರ್ಣಗೊಳಿಸಲಾಗುತ್ತದೆ?

ಉತ್ತರ

1. ರಾಜ್ಯ ಹೆದ್ದಾರಿಯ ಅಗಲ 12 ಮೀ. ಎಂದು ನಿಗದಿಪಡಿಸಿದೆ. ಡಾಂಬರೀಕರಣದ (ಕ್ಯಾರೇಜ್‌ವೇ) ಅಗಲ ಐ.ಆರ್.ಸಿ. ಪ್ರಕಾರ ಏಕಪಥ ರಸ್ತೆ ಅಗಲ 3.75 ಮೀ, ಮಧ್ಯಂತರ ಪಥ 5.50 ಮೀ. ಹಾಗೂ ದ್ವಿಪಥ ಅಗಲ 7.0 ಮೀ ಅಗಲ ಇರಬೇಕೆಂದು ನಿಗಧಿಪಡಿಸಿದೆ. ಈ ಅಗಲಕ್ಕೆ ಡಾಂಬರೀಕರಣ ಮಾಡಲಾಗುವುದು.

2. ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ 3 ರಾಜ್ಯ ಹೆದ್ದಾರಿಗಳು ಹಾದು ಹೋಗುತ್ತಿದ್ದು ವಿವರ ಈ ರೀತಿ ಇದೆ.

1) ರಾಜ್ಯ ಹೆದ್ದಾರಿ 88 ಮೈಸೂರು-ಬಂಟ್ವಾಳ ರಸ್ತೆ ಸ.61.00 ರಿಂದ 88.30 ಕಿಮೀ.ವರೆಗೆ -27.30 ಕಿಮೀ.

2) ರಾಜ್ಯ ಹೆದ್ದಾರಿ 88(ಎ) ಹುಣಸೂರು-ವಿರಾಜಪೇಟೆ ರಸ್ತೆ ಸ.12.20 ಯಿಂದ 21.60ರವರೆಗೆ -9.40 ಕಿಮೀ.

3) ರಾಜ್ಯ ಹೆದ್ದಾರಿ 21 ಹಳೇಬೀಡು-ಹಾಸನ-ಅರಕಲಗೂಡು-ಪಿರಿಯಾಪಟ್ಟಣ-ಕಾನೂನು-ಕುಟ್ಟರಸ್ತೆ ಸ.89.00 ರಿಂದ 128.30 ಕಿಮೀ.ವರೆಗೆ -34.30 ಕಿಮೀ.

ಮೇಲಿನ ಮೂರು ರಸ್ತೆಗಳ ಡಾಂಬರೀಕರಣ ಏಕ ಪಥ ಸಂಚಾರಕ್ಕೆ 3.75 ಮೀ, ಇರುತ್ತದೆ.

3. ಮೈಸೂರು ಬಂಟ್ವಾಳ ರಸ್ತೆ ಅಗಲೀಕರಣ ಹಾಗು ಅಭಿವೃದ್ಧಿಪಡಿಸಲು ಯೋಜನೆಯನ್ನು ಖಾಸಗೀ ಕ್ಷೇತ್ರದಿಂದ ತೆಗೆದುಕೊಳ್ಳಲು ಪರಿಶೀಲಿಸಲಾಗುತ್ತಿದೆ.

4. ಇನ್ನೂ ಅಗಲೀಕರಣ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಂಡಿರುವುದಿಲ್ಲ.

ಮೈಸೂರು-ಬಂಟ್ವಾಳ ರಸ್ತೆಗೆ ಮರು ಡಾಂಬರೀಕರಣ ಮಾಡುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 699(71)

ಸದಸ್ಯರ ಹೆಸರು : ಶ್ರೀ ಬಸವರಾಜು ಹೆಚ್.ಸಿ.(ಪಿರಿಯಾಪಟ್ಟಣ)

ಉತ್ತರಿಸುವ ಸಚಿವರು : ಶ್ರೀ ಧರ್ಮಸಿಂಗ್(ಲೋಕೋಪಯೋಗಿ ಸಚಿವರು)

ಪ್ರಶ್ನೆ

1. ಮೈಸೂರು-ಬಂಟ್ವಾಳ ರಸ್ತೆಯ ಎಷ್ಟು ಉದ್ದದ ರಸ್ತೆಯನ್ನು ಮರುಡಾಂಬರೀಕರಣ ಮಾಡಲಾಗುವುದು? (ತಾಲ್ಲೂಕುವಾರು ಮಾಹಿತಿ ನೀಡುವುದು)

2. ಇದಕ್ಕೆ ತಗಲುವ ಹಣವೆಷ್ಟು? ಇದನ್ನು ಯಾವ ಯೋಜನೆಯಡಿಯಲ್ಲಿ ಅಳವಡಿಸಲಾಗುವುದು?

3. ಪಿರಿಯಾಪಟ್ಟಣ ಕ್ಷೇತ್ರದಲ್ಲಿ ಡಾಂಬರೀಕರಣ ಮಾಡದೆ ರಸ್ತೆಯು ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಈ ಭಾಗದ ರಸ್ತೆ ಡಾಂಬರೀಕರಣ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮವೇನು? ಎಷ್ಟು ತಿಂಗಳಲ್ಲಿ ಪೂರ್ಣಗೊಳಿಸಲಾಗುವುದು?

ಉತ್ತರ

1. ಮೈಸೂರು-ಬಂಟ್ವಾಳ ರಾಜ್ಯ ಹೆದ್ದಾರಿಯಲ್ಲಿ ಪ್ರಸ್ತುತ ಸಾಲಿನಲ್ಲಿ "ರಾಜ್ಯ ಹೆದ್ದಾರಿ ನಿರ್ವಹಣೆ" ಯೋಜನೆಯಲ್ಲಿ ಒಟ್ಟು 66.32 ಕಿಮೀ. ಉದ್ದದ ರಸ್ತೆಯನ್ನು ಮರುಡಾಂಬರೀಕರಣ ಮಾಡಲು ಯೋಜಿಸಲಾಗಿದೆ. ತಾಲ್ಲೂಕುವಾರು ವಿವರ ಕೆಳಗಿನಂತಿದೆ.

ಕ್ರ.ಸಂ.	ತಾಲ್ಲೂಕು ವಿವರ	ಉದ್ದ ಕಿ.ಮೀ.
1	ಮೈಸೂರು ತಾಲ್ಲೂಕು	6.10
2	ಹುಣಸೂರು ತಾಲ್ಲೂಕು	16.50